C.C No. 168/2013
PW-13

ಪ್ರಮಾಣವಚನ ಬೋಧಿಸಲಾಯಿತು. ದಿಃ 05-01-2026

ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ

ದಿಃ 03.03.2006 ರಂದು ಚಾಸಾ-2 ರವರು ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಚಾಸಾ-9 ಮತ್ತು 10 ರವರ ಸಮಕ್ಷಮ ನಾನು ಅಮಾನತುಪಡಿಸಿಕೊಂಡಿರುತ್ತೇನೆ. ನಾನು ಅಮಾನತುಪಡಿಸಿಕೊಂಡ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಈಗ ಅಭಾವ ಕಾಮಗಾರಿ ಪುಸ್ತಕವನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ. 1 ಎಂದು ಸದರಿ ಪುಸ್ತಕದ 55ನೇ ಪುಟದಲ್ಲಿರುವ 38 ಮತ್ತು 39 ನೇ ಕ್ರಮಾಂಕದಲ್ಲಿರುವ ನಮೂದುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮಾ. 1ಎ ಮತ್ತು 1ಬಿ ಎಂದು ಗುರುತಿಸಲಾಯಿತು. ಸಾಕ್ಷಿ ಈಗ ಸಂಪೂರ್ಣ ಗ್ರಾಮೀಣ ರೋಜ್ ಗಾರ್ ಯೋಜನೆ 2002-2003 ಪುಸ್ತಕವನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ. 2 ಎಂದು ಸದರಿ ಪುಸ್ತಕದ 31ನೇ ಪುಟದಲ್ಲಿರುವ F51 ಮತ್ತು F52 ಎಂದು 2 ನಮೂದುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮಾ. 2ಎ ಮತ್ತು 2ಬಿ ಎಂದು ಗುರುತಿಸಲಾಯಿತು.

ಸಾಕ್ಷಿ ಈಗ ಸಂಪೂರ್ಣ ಗ್ರಾಮೀಣ ರೋಜ್ ಗಾರ್ ಯೋಜನೆ ಪುಸ್ತಕ ಸಂಖ್ಯೆ 2ನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ. 3 ಎಂದು ಸದರಿ ಪುಸ್ತಕದ 6 ನೇ ಪುಟದ ಹಿಂಬದಿಯಲ್ಲಿರುವ ದಿಃ 12.12.2003ರ ನಮೂದನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ. 3ಎ ಎಂದು ಗುರುತಿಸಲಾಯಿತು. ಸಾಕ್ಷಿ ಈಗ ಅಭಾವ ಪರಿಹಾರ ಯೋಜನೆಯ ಪುಸ್ತಕ ಸಂಖ್ಯೆ 4 ನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ. 4 ಎಂದು ಸದರಿ ಪುಸ್ತಕದ 180 ನೇ ಪುಟದಲ್ಲಿರುವ ದಿಃ 28.10.2003ರ ನಮೂದನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ. 4ಎ ಎಂದು ಗುರುತಿಸಲಾಯಿತು. ಸಾಕ್ಷಿ ಈಗ ದಿಃ 06.12.2003 ರಿಂದ 17.02.2004ರ Invoice ಪುಸ್ತಕವನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ. 5 ಎಂದು ಸದರಿ ಪುಸ್ತಕದ 6 ನೇ ಪುಟದಲ್ಲಿರುವ ದಿಃ 08.122003ರ F6 ಎನ್ನುವ ನಮೂದನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ. 5ಎ ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಸಿ.ಬಿ.ಎ. ವಕೀಲರಿಂದ</u>

ಚಾಸಾ-9 ಮತ್ತು 10 ರವರು ನಿಮ್ಮ ಕಾರ್ಯ ಅವಧಿಯಲ್ಲಿ ಎಷ್ಟು ಪ್ರಕರಣಗಳಲ್ಲಿ ಪಂಚರಾಗಿ ಬಂದಿದ್ದಾರೆಂದು ಕೇಳಿದಾಗ ಸಾಕ್ಷಿ ನನಗೆ ಅದರ ಬಗ್ಗೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. ಚಾಸಾ-9 ಮತ್ತು 10 ನಿಮ್ಮ ಪೋಲೀಸ್ ಠಾಣೆಯ ಹಲವಾರು ಪ್ರಕರಣಗಳಲ್ಲಿ ಪಂಚರಾಗಿ ಬಂದಿದ್ದಾರೆ ಎಂದರೆ ಸರಿಯಲ್ಲ. ನೀವು ಪಂಚರ ಸಮಕ್ಷಮ ಯಾವುದೇ ಮು.ಮಾ. ನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಪ್ರ.ವರ್ತಮಾನ ವರದಿಯನ್ನು ನಾನೇ ದಾಖಲಿಸಿಕೊಂಡಿದ್ದೇನೆ ಎಂದರೆ ಸರಿ. ನೀವು ಈ ಪ್ರಕರಣದ ಫಿರ್ಯಾದಿಯಿಂದ ದೂರು ದಾಖಲಿಸಲು ಏಕೆ ವಿಳಂಬ ಆಗಿದೆ ಎಂದು ಕೇಳಿದ್ದೀರಾ ಎಂದರೆ ಸಾಕ್ಷಿ ನಾನು ಮೌಖಿಕವಾಗಿ ಕೇಳಿದ್ದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು ಫಿರ್ಯಾದಿ ತಾನು ಅಧಿಕಾರ ವಹಿಸಿಕೊಂಡ ನಂತರ ಸದರಿ ಪ್ರಕರಣದ ಬಗ್ಗೆ ಗೊತ್ತಾಗಿದ್ದು ಆದ ಕಾರಣ ವಿಳಂಬವಾಗಿ ದೂರು ನೀಡಿದ್ದೇನೆ ಎಂದು ನನಗೆ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಫಿರ್ಯಾದಿ ನೀಡಿದ ವಿಳಂಬದ ಕಾರಣವನ್ನು ಪ್ರ.ವರ್ತಮಾನ ವರದಿಯಲ್ಲಿ ಅಥವಾ ಬೇರೆ ದಾಖಲೆಗಳಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ನಮೂದು ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ಈ ಮೊದಲು ತನಿಖಾಧಿಕಾರಿಗಳು ಬಿ ಅಂತಿಮ ವರದಿಯನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ನನ್ನ ಅವಧಿಯಲ್ಲಿ ಪ್ರಕರಣ ಇನ್ನೂ ತನಿಖೆಯಲ್ಲಿತ್ತು ಎಂದು ನುಡಿಯುತ್ತಾರೆ. ನಾನು ಈ ಪ್ರಕರಣದಲ್ಲಿ ಮು.ಮಾ. 1 ರಿಂದ 5ನ್ನು ದಿಃ 03.03.2006ರಂದು ಜಪ್ತುಪಡಿಸಿಕೊಂಡಿರುತ್ತೇನೆ. ಹಾಗಾದರೆ ನೀವು 6 ತಿಂಗಳ ನಂತರ ಮು.ಮಾ. 1 ರಿಂದ 5ನ್ನು ಜಪ್ತುಪಡಿಸಿಕೊಂಡಿದ್ದೀರಿ ಎಂದರೆ ಸರಿ. ಫಿರ್ಯಾದಿ ನಿಮ್ಮ ಮುಂದೆ ಹಾಜರಾಗಿ ಕೃತ್ಯ ನಡೆದಿದೆ ಎನ್ನುವ ಸಮಯದಲ್ಲಿ ಫಿರ್ಯಾದಿ AEE ಆಗಿರಲಿಲ್ಲ ಎಂದರೆ ಸರಿಯಲ್ಲ. ಫಿರ್ಯಾದಿ AEE ಯವರು ತಮ್ಮ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳಲು ಈ ಪ್ರಕರಣದ ದೂರನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿತ ತಾನು ಪಡೆದ ಎಲ್ಲಾ ಹಣದ ಕುರಿತು ಸದರಿ ಕೆಲಸವನ್ನು ಮಾಡಿದ್ದಾನೆ ಎಂದರೆ ಸರಿಯಲ್ಲ.

ಎಸ್.ಪಿ. ಕಲಬುರಗಿಯವರು ನಿಮಗೆ ಈ ಪ್ರಕರಣದ ಕುರಿತು ಒಂದು ಪತ್ರ ನೀಡಿದ್ದರು ಎಂದರೆ ಸರಿ. ಸದರಿ ಪತ್ರದಲ್ಲಿ ಎಸ್.ಪಿ. ಕಲಬುರಗಿಯವರು ನಿಮಗೆ ಅಂತಿಮ ವರದಿಯನ್ನು ಸಲ್ಲಿಸಲು ಸೂಚಿಸಿದ್ದರು ಎಂದರೆ ಸರಿ. ನಿಮ್ಮ ಮೇಲಧಿಕಾರಿಗಳ ಮತ್ತು ರಾಜಕೀಯ ಒತ್ತಡಕ್ಕಾಗಿ ನೀವು ಆರೋಪಿತನ ವಿರುದ್ಧ ಸುಳ್ಳು ದೂರನ್ನು ಸ್ವೀಕರಿಸಿ ತಪ್ಪಾಗಿ ಪ್ರ.ವರ್ತಮಾನ ವರದಿಯನ್ನು ದಾಖಲಿಸಿ ತಪ್ಪಾಗಿ ತನಿಖೆಯನ್ನು ಕೈಗೊಂಡಿದ್ದೀರಿ ಎಂದರೆ ಸರಿಯಲ್ಲ. ನೀವು ಚಾಸಾ-6 ರಿಂದ 8, 11, 12, 13

ರಿಂದ 16ರವರ ಯಾವುದೇ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನೀವು ಆಲೂರು ಗ್ರಾಮಕ್ಕೆ, ಬೊಮ್ಮನಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಯಾವುದೇ ಕಾಮಗಾರಿ ಕೆಲಸವನ್ನು ಪರಿಶೀಲನೆ ಮಾಡಿ ಪಂಚನಾಮೆಯನ್ನು ಜರುಗಿಸಿಲ್ಲ ಎಂದರೆ ಸರಿಯಲ್ಲ. ನೀವು ಚಾಸಾ- 2 ರವರಿಂದ ಯಾವುದೇ ದಾಖಲಾತಿಗಳನ್ನು ಜಪ್ತುಪಡಿಸಿಕೊಂಡಿಲ್ಲ ಮತ್ತು ಅವರ ಯಾವುದೇ ಪುರವಣಿ ಹೇಳಿಕೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನೀವು ಆರೋಪಿತನ ಯಾವುದೇ ಸಹಿಗಳನ್ನು ಪಡೆದು ತಾಳೆ ಮಾಡಲು ಸದರಿ ದಾಖಲೆಗಳನ್ನು ಹಸ್ತಾಕ್ಷರ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿತ ಯಾವುದೇ ಗುನ್ನೆ ಮಾಡಿಲ್ಲ ಎಂದು ಕಂಡು ಬಂದರೂ ಸಹ ತಪ್ಪಾಗಿ ತನಿಖೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಮು.ಮಾ. 1 ರಿಂದ 5 ದಾಖಲೆಗಳನ್ನು ಈ ಪ್ರಕರಣಕ್ಕೋಸ್ಕರ ಚಾಸಾ-2 ರವರು ತಯಾರಿಸಿದ್ದು ಅದರ ಬಗ್ಗೆ ನಿಮಗೆ ಮಾಹಿತಿ ಇದ್ದರೂ ಸಹ ಆರೋಪಿತನ ವಿರುದ್ಧ ತಪ್ಪಾಗಿ ತನಿಖೆ ಮಾಡಿದ್ದೀರಿ ಎಂದರೆ ಸರಿಯಲ್ಲ. ಮು.ಮಾ. 1 ರಿಂದ 5 ದಾಖಲೆಗಳು ಯಾರ ಬಳಿ ಇದ್ದವು ಎಂದರೆ ಸಾಕ್ಷಿ ಚಾಸಾ-1ರವರ ಬಳಿ ಇದ್ದು ಸದರಿ ದಾಖಲೆಗಳನ್ನು ಚಾಸಾ-2ರವರು ನನ್ನ ಸಮಕ್ಷಮ ಹಾಜರುಪಡಿಸಿರುತ್ತಾರೆಂದು ನುಡಿಯುತ್ತಾರೆ. ಮು.ಮಾ. 1 ರಿಂದ 5 ದಾಖಲೆಗಳು ಅಕೌಂಟೆಂಟ್ ಕಸ್ಟಡಿಯಲ್ಲಿ ಇರಬೇಕಾಗುತ್ತದೆ ಎಂದರೆ ಸಾಕ್ಷಿ ಚಾಸಾ-1ರವರಿಗೆ ನಾವು ನೋಟೀಸು ಕೊಟ್ಟ ಮೇರೆಗೆ ಚಾಸಾ-2 ರವರು ಅದನ್ನು ಹಾಜರುಪಡಿಸಿರುತ್ತಾರೆಂದು ನುಡಿಯುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,

ಚಿತ್ತಾಪೂರ.